**ಸಾಕ್ಷಿಯನ್ನು ದಿನಾಂಕಃ21.03.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಸಿ ಬಿ ಎಂ ವಕೀಲರಿಂದಃ**

1. ನಾನು ಬಿ ಎ ಓದಿದ್ದೇನೆ. ನಾನು ಸಲ್ಲಿಸಿರುವ ಪ್ರಮಾಣ ಪತ್ರಿಕೆಯನ್ನು ನಾನೇ ಹೇಳಿ ಬರೆಸಿರುತ್ತೇನೆ. ಪ್ರತಿವಾದಿಯರು ನನಗೆ ಕರಾರು ಪತ್ರ ಬರೆದುಕೊಟ್ಟ ಕೆಲವು ದಿನಗಳ ಹಿಂದಿನಿಂದ ಗೊತ್ತು. ಪ್ರತಿವಾದಿಯರು ದಾವಾ ಸ್ವತ್ತು ಅವರಿಗೆ ಪಿತ್ರಾರ್ಜಿತವಾಗಿ ಬಂದಿತ್ತು ಎಂದು ಹೇಳಿದ್ದರು. ಪ್ರತಿವಾದಿಯರು ಯಾರ ಬಳಿ ಕೈ ಸಾಲ ಮಾಡಿದ್ದರು ಎಂದು ನನಗೆ ಹೇಳಿಲ್ಲ. ಕ್ರಯದ ಮಾತುಕತೆಗೆ ಶ್ರೀನಿವಾಸ ಮತ್ತು ಶಿವಾನಂದ ಎನ್ನುವವರು ಸೇರಿದ್ದರು. ಅವರು ನನ್ನ ಪರವಾಗಿ ಬಂದಿದ್ದರು. ಪ್ರತಿವಾದಿಯರ ಪರವಾಗಿ ಯಾರು ಬಂದಿದ್ದರು ಎಂದು ನನಗೆ ನೆನಪಿಲ್ಲ. ಮತ್ಯಾರು ಇದ್ದರು ಎಂದು ನನಗೆ ನೆನಪಿಲ್ಲ. ಸಾಕ್ಷಿಯು ಮುಂದುವರಿದು ತನಗೆ ಕ್ರಯ ಪತ್ರ ಬರೆದುಕೊಟ್ಟ ವ್ಯಕ್ತಿಗಳು ಇದ್ದರು ಎಂದು ನುಡಿದಿರುತ್ತಾರೆ. ನನಗೆ ಕ್ರಯ ಪತ್ರ ಬರೆದುಕೊಟ್ಟ ಬಾಲರಾಜು, ಲತಾ, ಹರಿದಾಸ್, ಹೇಮಂತ್ ಕುಮಾರ್, ರೂಪಿಣಿ ಮತ್ತು ಮಮತಾ ಇದ್ದರು. ಅವರನ್ನು ಬಿಟ್ಟು ಮತ್ತೆ ಯಾರೂ ಇರಲಿಲ್ಲ ಎಂದರೆ ನಾನು ಗಮನಿಸಲಿಲ್ಲ. ನಾವು ಮಾತುಕತೆಗೆ ಮದ್ದೂರಿನಲ್ಲಿ ಪತ್ರ ಬರೆದ ದಿನಾಂಕಃ 05.12.2020 ರಂದು ಸೇರಿದ್ದೆವು. ಆಗ ಸಮಯ ಬೆಳಿಗ್ಗೆ 10.00 ಗಂಟೆ ಆಗಿತ್ತು. ಜಮೀನನ್ನು ಮಾರಾಟ ಮಾಡುತ್ತೇವೆ ಎಂದು ಲತಾ ಮತ್ತು ಹರಿದಾಸ್ ರವರು ಕೇಳಿಕೊಂಡು ಬಂದಿದ್ದರು. ಒಂದು ಗುಂಟೆಗೆ ರೂ. 75 ಸಾವಿರ ಎಂದು ಅವರು ಹೇಳಿದ್ದರು. ಒಂದು ಗುಂಟೆಗೆ ರೂ. 63 ರಿಂದ 66 ಸಾವಿರ ಕ್ಕೆ ವ್ಯಾಪಾರ ನಿಗಧಿಯಾಯಿತು. ನಿಖರವಾಗಿ ಎಷ್ಟು ಮೊತ್ತಕ್ಕೆ ವ್ಯಾಪಾರ ಆಯಿತು ಎಂದು ನನಗೆ ಹೇಳಲು ಆಗುವುದಿಲ್ಲ ಎಂದರೆ , ರೂ. 66 ಸಾವಿರಕ್ಕೆ ಒಂದು ಗುಂಟೆ ವ್ಯಾಪಾರ ಆಯಿತು. ಮಾತುಕತೆ ಮುಗಿದ ತಕ್ಷಣ ನಾನು ಯಾವುದೇ ಮುಂಗಡ ಹಣ ಕೊಡಲಿಲ್ಲ. ನಾನು ದಾವಾ ಆಸ್ತಿಯ ದಾಖಲಾತಿಗಳನ್ನು ಪರಿಶೀಲನೆ ಮಾಡಿದ್ದೆ. ವ್ಯಾಪಾರದ ಮಾತುಕತೆ ಅರ್ಧ ಗಂಟೆಯಲ್ಲಿ ಮುಗಿಯಿತು. ಕರಾರು ಪತ್ರವನ್ನು ಮಾತುಕತೆ ಮುಗಿದ ನಂತರ ತಯಾರು ಮಾಡಿದ್ದು, ಸಮಯ ನಿಖರವಾಗಿ ಗೊತ್ತಿಲ್ಲ. ಕರಾರು ಪತ್ರವನ್ನು ತಯಾರು ಮಾಡಲು ಸ್ಟಾಂಪ್ ವೆಂಡರ್ ಗೆ ಹರಿದಾಸ್, ಲತಾ ಮತ್ತು ಬಾಲರಾಜು ಹೇಳಿರುತ್ತಾರೆ. ರೂ. 1 ಲಕ್ಷ ಹಣವನ್ನು ನಾನು ಉಪನೊಂದಣಾಧಿಕಾರಿ ಮುಂದೆ ಕೊಟ್ಟಿದ್ದು, ಅದನ್ನು ರೂ.

500/- ಮುಖಬೆಲೆಯ 100 ನೋಟು ಇರುವ 2 ಬಂಡಲ್ ಗಳನ್ನು ಕೊಟ್ಟಿರುತ್ತೇನೆ. ನಾನು ಚೆಕ್ ಮೂಲಕ ಹಣ ಕೊಟ್ಟಿದ್ದು, ಚೆಕ್ ನಂಬರ್ ಹೇಳಲು ನನಗೆ ನೆನಪಿಲ್ಲ. ಚೆಕ್ ಅನ್ನು ಸಿ ಡಿ ಬಾಲರಾಜು ರವರ ಹೆಸರಿಗೆ ಕೊಟ್ಟಿದ್ದೆ.

2. ಕರಾರು ಪತ್ರ ಮಾಡಿಸಿಕೊಂಡ ದಿನವೇ ಶುದ್ಧ ಕ್ರಯ ಪತ್ರ ಮಾಡಿಸಿಕೊಳ್ಳಲು ತೊಂದರೆ ಇತ್ತಾ ಎಂದರೆ ಆರ್ ಟಿ ಸಿ ಒಟ್ಟಿನಲ್ಲಿ ಇದ್ದು, ಅದು ಬೇರೆ ಆಗಲು ನಕಾಶೆ ಆಗಬೇಕು ಎಂದು ಹೇಳಿದ್ದರಿಂದ ಆ ದಿನ ಶುದ್ಧ ಕ್ರಯ ಪತ್ರ ಆಗಲಿಲ್ಲ. ಆರ್ ಟಿ ಸಿ ಯು ಸಿ.ಡಿ. ಬಾಲರಾಜು, ವೆಂಕಟಾಚಲ ಮತ್ತು ಆದರ್ಶ ರವರ ಹೆಸರಿನಲ್ಲಿ ಒಟ್ಟಿಗೆ ಇತ್ತು. ದಾವಾ ಸರ್ವೆ ನಂಬರ್ ನಲ್ಲಿ 11 ಗುಂಟೆ ನಾನು ಹೇಳಿದ 3 ಜನ ಹೆಸರಿನಲ್ಲಿ ಇರಲಿಲ್ಲ. ಕ್ರಯ ಕರಾರು ಪತ್ರ ಆದ 10 ತಿಂಗಳ ನಂತರ ಕ್ರಯ ಪತ್ರ ಬರೆದುಕೊಡಬೇಕೆಂದು ಪ್ರತಿವಾದಿಯರ ಮನೆಯ ಬಳಿ ಹೋಗಿದ್ದೆ, ದಿನಾಂಕ ನನಗೆ ನೆನಪಿಲ್ಲ. ಆ ರೀತಿ ನಾನು 2 ಬಾರಿ ಹೋಗಿದ್ದೆ. ಆ ರೀತಿ ಒಬ್ಬನೇ ಹೋಗಿದ್ದೆ.

3. ನಾನು ನೋಟೀಸನ್ನು ನನಗೆ ಕರಾರು ಪತ್ರ ಬರೆದುಕೊಟ್ಟವರೆಲ್ಲರಿಗೂ ಕೊಟ್ಟಿದ್ದೇನೆ. ನಮಗೆ ಮಾಹಿತಿ ಪ್ರಕಾರ ಆ ನೋಟೀಸ್ ಬಾಲರಾಜು ರವರಿಗೆ ತಲುಪಿದೆ. ಸಾಕ್ಷಿಯು ಮುಂದುವರಿದು ಸ್ವೀಕೃತಿಯಲ್ಲಿ ಬೇರೆಯವರ ಸಹಿ ಇದೆ ಎಂದು ನುಡಿದಿರುತ್ತಾರೆ. ನಾನು ನೋಟೀಸನ್ನು 2021 ನೇ ಇಸವಿಯ ನವೆಂಬರ್ ತಿಂಗಳಿನಲ್ಲಿ ಕೊಟ್ಟಿರುತ್ತೇನೆ.

4. ಸಿ ಡಿ ಬಾಲರಾಜು ರವರು ನಮಗೆ ಕರಾರು ಪತ್ರ ಮಾಡಿಕೊಟ್ಟ ಸಮಯದಲ್ಲಿ ಡಯಾಲಿಸ್ ಪೇಶೆಂಟ್ ಆಗಿದ್ದರು ಎಂದರೆ ನನಗೆ ಗೊತ್ತಿಲ್ಲ. ನನಗೆ ಕರಾರು ಪತ್ರ ಬರೆದುಕೊಟ್ಟಾಗ ಅವರ ಮುಖ ಚರ್ಯೆ ನಾನು ನೋಡಿದ್ದು, ಆಗ ಅವರು ಆರೋಗ್ಯವಾಗಿ ಇದ್ದರು. ಸಿ ಡಿ ಬಾಲರಾಜು ರವರು ಈಗ ಬದುಕಿಲ್ಲ, ಮೃತ ಪಟ್ಟಿದ್ದಾರೆ ಎಂದರೆ ಸರಿ. ಕರಾರು ಪತ್ರ ಬರೆದುಕೊಟ್ಟ ನಂತರ ಎಷ್ಟು ದಿನಕ್ಕೆ ಮೃತ ಪಟ್ಟರು ಎಂದು ನನಗೆ ಮಾಹಿತಿ ಇಲ್ಲ. ಅವರು ತೀರಿಕೊಂಡ ಒಂದು ವರ್ಷದ ನಂತರ ನನಗೆ ಅವರು ತೀರಿಕೊಂಡ ವಿಷಯ ಗೊತ್ತಾಯಿತು. ದಾವಾ ಸರ್ವೆ ನಂಬರ್ ನಲ್ಲಿ ಒಟ್ಟು ವಿಸ್ತೀರ್ಣ 25 ಗುಂಟೆ ಇರುತ್ತದೆ.

5. ನನಗೆ ಲೇವಾದೇವಿ ವ್ಯವಹಾರ ಮಾಡುವ ಹವ್ಯಾಸ ಇದೆ ಎಂದರೆ ಸರಿಯಲ್ಲ. ಆಶಾ ಬಿನ್ ಮಲ್ಲೇಶ್ ನನ್ನ ಮಗಳು ಎಂದರೆ ಎಸ್ ಎಂ ಆಶಾ ನನ್ನ ಮಗಳು. ನನ್ನ ಮಗಳು ಚಾಮನಹಳ್ಳಿಯ ಎಂ ಕೆಂಚಯ್ಯ ಬಿನ್ ಮಲ್ಲಿಚೆನ್ನೇಗೌಡ ರವರ ವಿರುದ್ದ ನಿರ್ಧಿಷ್ಟ ಅನುಷ್ಠಾನಕ್ಕಾಗಿ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿ. ನಾನು ನನ್ನ ಮಗಳ ಮೂಲಕ ಅವರಿಗೆ ಹಣ ಕೊಡಿಸಿ ಅವರು ಹಣ ವಾಪಾಸ್ ಕೊಡದೇ ಇದ್ದುದಕ್ಕೆ ಆ ದಾವೆ ಸಲ್ಲಿಸಿದ್ದೇನೆ ಎಂದರೆ ನನ್ನ ಮಗಳು ಅವಳ ಸ್ವಂತ ಹಣದಲ್ಲಿ ವ್ಯವಹಾರ ಮಾಡಿದ್ದಾಳೆ. ನಾನು ಸಿ ಡಿ ವೆಂಕಟಾಚಲ ಎನ್ನುವವರ ಮೇಲೆ ನಿರ್ಧಿಷ್ಟ ಅನುಷ್ಠಾನಕ್ಕಾಗಿ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿ.

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗಾಗಿ ವಕೀಲರು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.